ಕಳೆದ ಬಾರಿ, ಬೇರೆ ಏರ್‌ಲೈನ್ಸ್ ಬಳಸಿದ್ದೆ. ಆ ಟರ್ಮಿನಲ್‌ನಲ್ಲಿದ್ದ ಜಗಮಗಿಸುವ ಲೈಟುಗಳು, ನಿದ್ದೆಯಲ್ಲಿರುವವರನ್ನೂ ಎಚ್ಚರಿಸುವಂತಹ ಚಟುವಟಿಕೆಗಳು, ಸ್ವಾಗತದ ನಗೆ ಬೀರುವ ಸಿಬ್ಬಂದಿಗಳು, ಯಾರಿಗಾದರೂ ತಮ್ಮಿಂದ ಉಪಕಾರ ಮಾಡಲು ಸಾಧ್ಯವೇ ಎಂದು ಹುಡುಕುವ ಸಹಾಯಕರು, ಜನರ ಉಲ್ಲಸಿತ ಮಾತು–ನಗೆಗಳು, ಸಂಭ್ರಮದ ವಾತಾವರಣವನ್ನು ಸೃಷ್ಟಿಸಿದ್ದನ್ನು ನೋಡಿ ಮೆಚ್ಚಿದ್ದ ನನಗೆ ಸ್ವಲ್ಪ ಪಿಚ್ಚೆನಿಸಿತು.

ಅಷ್ಟರಲ್ಲಿ ಒಂದಿಷ್ಟು ಗಲಾಟೆ ಕೇಳಿಬಂದಿತು...

ಯಾರೋ 'ಕ್ಯೂ ತಪ್ಪಿಸಿ, ಸರತಿಯನ್ನು ಪಾಲಿಸದೆ ಮುಂದೆ ನುಗ್ಗಿದರು' ಎಂದು ಜಗಳ ಶುರುವಾಗಿತ್ತು. ಒಬ್ಬ ಸರ್ದಾರ್ಜಿಯೂ ಮತ್ತೊಬ್ಬ ಮುಂಬೈವಾಲಾ ಇಬ್ಬರೂ ಜಟಾಪಟಿಗೆ ಬಿದ್ದಿದ್ದರು. ಅಕಸ್ಮಾತ್ ಹೊಡೆದಾಡಿಕೊಂಡರೆ ಇರಲಿ ಎಂದು ಅವರ ಪತ್ನಿಯರು ಯಾವ ಸಮಾಧಾನಗಳನ್ನೂ, ಪರಿಹಾರಗಳನ್ನೂ ಸೂಚಿಸದೆ ಕ್ಯಾಮೆರಾದಲ್ಲಿ ಅವರ ವಾಗ್ವಾದವನ್ನು ರೀಲ್ಸ್ ಮಾಡಿಕೊಳ್ಳುತ್ತಿದ್ದರು.

ಅದುವರೆಗೆ ಬೋರು ಹೊಡೆಸಿಕೊಂಡು ನಿಂತಿದ್ದ ಎಲ್ಲರಿಗೂ ಎಚ್ಚರವಾದಂತೆನಿಸಿತು. ದಪ್ಪ ಹೊಟ್ಟೆಗಳನ್ನು ಹೊತ್ತು ತಿರುಗುತ್ತಿದ್ದ ಏರ್ ಇಂಡಿಯಾ ಸೆಕ್ಯೂರಿಟಿ ಆಫೀಸರುಗಳು 'ಯಾರೇ ಕೂಗಾಡಲಿ, ಊರೇ ಹೋರಾಡಲಿ' ಎಂಬ ಲೆಕ್ಕಕ್ಕೆ 'ಪ್ಯಾಸೆಂಜರುಗಳು ಮಾಡಿಕೊಳ್ಳುವ ಜಗಳಗಳನ್ನು ಅವರೇ ಪರಿಹರಿಸಿಕೊಳ್ಳಲಿ' ಎಂದು ಆರಾಮಾಗಿ ಸುಮ್ಮನಿದ್ದರು.

ಇದನ್ನು ಕಾಣುತ್ತಿದ್ದಂತೆ, ನನ್ನ ಸರ್ವೈವಲ್ ಇನ್‌ಸ್ಟಿಂಕ್ಟ್ ಎಚ್ಚರವಾಯಿತು. ಸರತಿ ಹಾರಿ ಮುಂದೆ ಹೋದರೆ, ಜಗಳ ಮಾಡಿ ಸ್ವಸ್ಥಾನಕ್ಕೆ ಮರಳಲು, ಹಿಂದಿದ್ದವರ ಮುಖಗಳನ್ನು ಒಮ್ಮೆ ನೋಡಿ, ನೆನಪಿಟ್ಟುಕೊಂಡೆ. ಲಗೇಜ್ ಚೆಕಿನ್ ಮಾಡುತ್ತಿದ್ದವರು ಪ್ರಯಾಣಿಕರ ಮುಂದೆ ನಿರ್ಜೀವ ಮುಖಗಳನ್ನು ಪ್ರದರ್ಶಿಸಿ, ಪಕ್ಕದ ಸಹೋದ್ಯೋಗಿಗಳೊಡನೆ ಮಾತಾಡುವಾಗ ತಟಕ್ಕನೆ ಜೀವಂತವಾಗುತ್ತಿದ್ದ ದೃಶ್ಯ ಮನಸ್ಸಿನ ಮೇಲೆ ಒಂದು ಬಗೆಯ ಜಾದೂವನ್ನು ಸೃಷ್ಟಿಸಿತು.

ನನ್ನ ಸರತಿ ಬಂದಾಗ, ಗಾಢವಾದ ಲಿಪ್‌ಸ್ಟಿಕ್ ಹಚ್ಚಿ, ಕೂದಲನ್ನು ಹಿಂದಕ್ಕೆಳೆದು ಪುಟ್ಟ ಗಂಟು ಹಾಕಿದ್ದ ಲಲನೆಯೋರ್ವಳು ನನ್ನ ದೊಡ್ಡ ಗಂಟುಗಳನ್ನು ಒಂದೂ ಮಾತಾಡದೆ ತೂಕ ಮಾಡಿ ಒಳಗೆ ಸೆಳೆದುಕೊಂಡಳು. ಮುಂದೆಯೇ ನಿಂತಿದ್ದರೂ ಅವಳಿಗೆ ಅದೃಶ್ಯ ಸ್ಥಿತಿಯಲ್ಲಿ ಕಾಣುತ್ತಿದ್ದ ನಾನು, ಭಾರತೀಯಳೇ ಆದ ಅವಳ ಸೈನ್ ಲಾಂಗ್ವೇಜನ್ನು ಸುಲಭವಾಗಿ ಅರ್ಥಮಾಡಿಕೊಂಡು ಸಹಕರಿಸಿದೆ.

'ಮೇಡಂ ವೆಜಿಟೇರಿಯನ್ ಫುಡ್' ಎಂದೆ. ಹೆಬ್ಬೆರಳೆತ್ತಿದಳು. ಮೆಲ್ಲದನಿಯಲ್ಲಿ 'ಒಬ್ಬಳೇ ಪ್ರಯಾಣಿಸುತ್ತಿದ್ದೇನೆ, ಕಿಟಕಿಯ ಪಕ್ಕದ್ದೋ, ಸಾಲಿನ ಕೊನೆಯದ್ದೋ ಸೀಟು ಸಿಗಬಹುದೇ?' ಎಂದು ಮೃದುವಾಗಿ ಕೇಳಿದೆ. ಒಮ್ಮೆ ನನ್ನತ್ತ ತೀಕ್ಷ್ಣವಾಗಿ ನೋಡಿ, ಏನೋ ಲೆಕ್ಕ ಹಾಕುವಂತೆ ಕಂಪ್ಯೂಟರಿನ ಪರದೆಯನ್ನು ವೀಕ್ಷಿಸುತ್ತ ಅರೆಕ್ಷಣ ತಟಸ್ಥಳಾಗಿ, ಕೊಮೋಡೋ ಐಲಾಂಡಿನ ಡ್ರಾಗನ್ನಿನ ರೀತಿಯಲ್ಲಿ ತಲೆಕುಣಿಸಿದಳು.

'ಮಾತಾಡದಿದ್ದರೇನು... ಕೂಲಾಗಿ ಕೆಲಸ ಮಾಡಿಕೊಟ್ಟಳು' ಎಂದು ಬೋರ್ಡಿಂಗ್ ಪಾಸ್ ಪಡೆದು ಅಲ್ಲಿಂದ ಸ್ವಲ್ಪ ದೂರ ನಡೆದು ವಿಜಯದ ನಗೆಬೀರುತ್ತ 'ವಿ' ಆಕಾರದಲ್ಲಿ ಬೆರಳು ಬಿಡಿಸಿ, ಸೆಲ್ಫೀ ತಗೊಂಡು ಇನ್‌ಸ್ಟಂಟ್ ಆಗಿ ಇನ್‌ಸ್ಟಾಗೆ ಪೋಸ್ಟಿಸಿದೆ. ಅವತ್ತು ಬೇರೆ ನನ್ನ ಹುಟ್ಟಿದ ಹಬ್ಬವಾದ ಕಾರಣ, ಗಿರಿಜಾ ಮೀಸೆ ಹೊತ್ತು, ಕುರ್ತಾ ತೊಟ್ಟು ವಿನಮ್ರವಾಗಿ ಕೈ ಜೋಡಿಸಿ ನಿಂತ ಏರ್ ಇಂಡಿಯಾದ ಸೇವಕ ನೆನಪಾದ. ಅವನು ಕಿರುನಕ್ಕು ಆಶೀರ್ವದಿಸಿದಂತೆನಿಸಿ ಖುಷಿಯಿಂದ ಒಳನಡೆದೆ.

ಸೆಕ್ಯೂರಿಟಿಯನ್ನು ಹಾದು ಗೇಟಿನ ಬಳಿ ಬರುವ ವೇಳೆಗೆ ವಿಮಾನ ಬೋರ್ಡಿಂಗ್ ಆಗುವ ಸಮಯ ಬಂದಿತ್ತು. ಒಂದು ಎಂದು ಶುರುವಾಗಿದ್ದ ಕ್ಯೂ, ಹಿಂದಕ್ಕೆ ಬಂದಂತೆ ನಾಲ್ಕು ಸಾಲುಗಳಾಗಿ ಟಿಸಿಲೊಡೆದಿತ್ತು. ಉದ್ದಗಳನ್ನು ಲೆಕ್ಕ ಹಾಕಬಹುದಾದರೂ, ಮಧ್ಯೆ ಮಧ್ಯೆ ಹೋಗಿ ಪ್ರಶ್ನೆ ಕೇಳಿದಂತೆ ಮಾಡಿ ಅಲ್ಲೇ ಸೇರಿಕೊಂಡು ಬಿಡುವ ಬಂಧುಗಳ ಚಾಣಾಕ್ಷತೆಗೆ ಸಾಟಿಯುಂಟೇ? ಹಾಗಾಗಿ ಆಗ ತಾನೇ ಮಿಕವನ್ನು ನುಂಗಿದ ಹೆಬ್ಬಾವಿನ ಹೊಟ್ಟೆಯಂತೆ ಅಲ್ಲಲ್ಲಿ ಊದಿದ್ದ ಸಾಲನ್ನು ಬಿಟ್ಟು ಬೇರೆಡೆ ನಿಂತೆ.

ಕೈಗಳನ್ನು ಹಿಂದಕ್ಕೆ ಕಟ್ಟಿಕೊಂಡು, ಯಾವ ಕೆಲಸವನ್ನೂ ಮಾಡದೆ ಓಡಾಡುತ್ತಿದ್ದ ನಾಲ್ಕಾರು ಸಿಬ್ಬಂದಿಗಳು, ಜನರನ್ನು ಶಿಸ್ತಾಗಿ ನಿಲ್ಲಿಸಿ, ವಯಸ್ಸಾದವರು, ಮಕ್ಕಳು–ಮರಿಗಳು ಇರುವವರಿಗೆ ಆದ್ಯತೆ ನೀಡುವುದು ತಮ್ಮ ಕೆಲಸವೇ ಅಲ್ಲ ಎನ್ನುವಂತೆ ಸಮಾಧಾನಚಿತ್ತವದನರಾಗಿದ್ದರು. ಚಿಕ್ಕ ವಯಸ್ಸಿಗೇ ಸಾಧಿಸಿದ ಈ ನಿರ್ಲಿಪ್ತತೆ ಮತ್ತು ಸ್ಥಿತಪ್ರಜ್ಞತೆಯನ್ನು ನೋಡಿ ಅವರನ್ನು ಮೆಚ್ಚದೇ ಇರಲು ಸಾಧ್ಯವಾಗಲಿಲ್ಲ. ಅದರಲ್ಲೂ, ಭಾರತೀಯ ಮುಖಗಳಾದ್ದರಿಂದ ಅದು ಅತ್ಯಂತ ಸುಲಭವೆನಿಸಿತು.

'ಅರೆರೆರೆ ಜನರ ಹಕ್ಕು, ಬಾಧ್ಯತೆಗಳನ್ನು ಲಂಡನ್ನಿನಲ್ಲಿ ಗಟ್ಟಿಸಿ ಕೇಳುವ, ನಿರೀಕ್ಷೆಗಿಂತ ಒಂದಿಷ್ಟು ಕಡಿಮೆಯಾದರೂ ಅಪೇಕ್ಷಣೆ ಮಾಡಲು ಕಲಿತಿರುವ ನಾನು 'ನಿಮ್ಮ ಸಂಬಳಕ್ಕೆ ಒಂದಿಷ್ಟು ಕೆಲಸ ಮಾಡ್ರಪ್ಪಾ' ಎನ್ನುವ ಬದಲು, 'ಪಾಪದವರು, ಅವರಿಗೂ ದಿನಾ ಇದೇ ಮಾಡಿ, ಮಾಡಿ ಬೇಜಾರು' ಅಂತೆಲ್ಲ ಆಧ್ಯಾತ್ಮಿಕವಾಗಿ ಯೋಚಿಸುವಷ್ಟು, ಏರ್‌ಪೋರ್ಟಿನಲ್ಲೇ ಬದಲಾಗುತ್ತಿದ್ದೇನಲ್ಲ ಅಂತ ಅನ್ನಿಸಿ ಆಶ್ಚರ್ಯವಾಯಿತು.

ಬದಲಾಗದ ನಮ್ಮ ಬಲಿಷ್ಠ ವ್ಯವಸ್ಥೆಗಳು, ಎಂತಹವರನ್ನಾದರೂ ತಮ್ಮ ಪ್ರಕಾರಗಳಿಗೆ ಪಳಗಿಸಿ ಬಗ್ಗಿಸಿಕೊಂಡುಬಿಡುತ್ತದೆ. ಇಂತಹ ಸಾವಿರಾರು ವಿಚಾರಗಳನ್ನು ಸಹಿಸುವ ನಮ್ಮವರ ಅಗಾಧ ಸಹಿಷ್ಣುತೆಯ ಬಲದ ಮುಂದೆ, ನನ್ನ ದನಿ ಅಡವಿಯಲ್ಲೆಲ್ಲೋ ಕಳೆದುಹೋದಂತೆನಿಸಿತು. ನನ್ನ ಬುದ್ಧಿ ಏರ್ ಇಂಡಿಯಾ ಟರ್ಮಿನಲ್ಲಿನ ಮಂದ ಪ್ರಕಾಶದ ಬಲ್ಬಿನಂತೆ ಡಲ್ಲಾಗತೊಡಗಿತು.

ಇನ್ನೈದೇ ಐದು ನಿಮಿಷದಲ್ಲಿ ಕ್ಲೈಮ್ಯಾಕ್ಸ್ ತಲುಪಿ ವಿಮಾನವೇರಲಿದ್ದೇನೆ ಎನ್ನುವಾಗ 'ವಿಮಾನ ಅರ್ಧ ಗಂಟೆ ತಡವಾಗುತ್ತಿದೆ, ಎಲ್ಲ ಕೂತ್ಕೊಳ್ಳಿ' ಎಂದು ಘೋಷಿಸಿದರು. ಆ ಘೋಷಣೆಯಲ್ಲಿ ಕನಿಷ್ಠ ಒಂದು ಕ್ಷಮೆಯಾಚನೆಯೂ ಇರಲಿಲ್ಲ ಎಂದು ಯೋಚಿಸುತ್ತಲೇ, ಸಾಲಿನಿಂದ ಹೊರಬಿದ್ದೆ. ತಮ್ಮ ಬುದ್ಧಿಯನ್ನೆಲ್ಲ ಖರ್ಚು ಮಾಡಿ, ಕ್ಯೂನಲ್ಲಿ ನಿಂತಂತೆ ತೋರಿ, ಒಮ್ಮೆಲೆ ಒಳನುಗ್ಗಲು ತಯಾರಿದ್ದ ಜನರೆಲ್ಲ ಹೈರಾಣಾಗಿ ಚೆಲ್ಲಾಪಿಲ್ಲಿಯಾದರು.

ಈಗಲೋ, ಆಗಲೋ ಕೊನೆಯುಸಿರುಬಿಡುತ್ತೇನೆ ಎನ್ನುವಂತಿದ್ದ ಜಂಗಮವಾಣಿಗೆ ಒಂದಿಷ್ಟು ಉಣಿಸಲು ನಾನು ಚಾರ್ಜಿಂಗ್ ಪಾಯಿಂಟ್ ಹುಡುಕತೊಡಗಿದೆ.

ಏರ್ ಇಂಡಿಯಾ ಗೇಟುಗಳಲ್ಲಿದ್ದ ಯಾವ ಚಾರ್ಜಿಂಗ್ ಪಾಯಿಂಟಿನಲ್ಲೂ ನನ್ನ ಫೋನ್ ಚಾರ್ಜಾಗದೆ ಗಾಬರಿಯಾದೆ. ಕರಿ ಸೂಟುಗಳನ್ನು ತೊಟ್ಟು, ಕೈಯಲ್ಲಿ ವಾಕಿ–ಟಾಕಿ ಹಿಡಿದು, ರಹಸ್ಯ ಏಜೆಂಟರ ಗೆಟಪ್ಪಿನಲ್ಲಿ, ಆಮೆಯ ಗತಿಯಲ್ಲಿ ಅತ್ತಿಂದಿತ್ತ ಓಡಾಡುತ್ತ, ಥಳಾಗಿ ಕಾಣುತ್ತಿದ್ದ. ನಮ್ಮ ಸಮಸ್ಯೆಗಳನ್ನು ನೋಡಿಯೂ ನೋಡದಂತೆ ನಟಿಸುತ್ತಿದ್ದ ಒಂದಿಬ್ಬರು ಸಿಬ್ಬಂದಿಯನ್ನು, ನಾನೇ ಹಿಡಿದು ನಿಲ್ಲಿಸಿ, 'ಹೀಗೆ... ಯಾಕೆಂದು?' ಕೇಳಿದೆ.

ಅಲೆಗಳೇ ಉದಿಸದ ಸಮುದ್ರದ ಶಾಂತತೆಯಲ್ಲಿ ಅವರು 'ಕರೆಂಟ್ ಇಲ್ಲ ಮೇಡಂ' ಎಂದರು. 'ಅರೆರೆ... ಇನ್ನೂ ಲಂಡನ್ ಬಿಟ್ಟೇ ಇಲ್ಲ, ಆಗಲೇ ಕರೆಂಟ್ ಇಲ್ಲವಾ?' ಅಂತ ಆಶ್ಚರ್ಯವಾಯಿತು. ದೂರಕ್ಕೆಲ್ಲೋ ಬೆರಳು ತೋರಿಸಿ 'ಸ್ವಲ್ಪ ದೂರ ಹೋಗಿ ಪ್ರಯತ್ನಿಸಿ' ಅಂದರು. ಅನತಿ ದೂರದಲ್ಲೊಂದು ಕಡೆ, ಕಂಬದಂತಹ ಚಾರ್ಜಿಂಗ್ ಪಾಯಿಂಟ್ ಇತ್ತು. ಅದರ ನಾಲ್ಕೂ ಸುತ್ತಕ್ಕೂ ಜನರು ನಿಂತಿದ್ದರು.

ಹತ್ತಿರ ಹೋದೆ. ಆ ಚಾರ್ಜಿಂಗ್ ಪಾಯಿಂಟ್ ಅನ್ನು ಚಾರ್ಜ್ ಮಾಡಲು, ಗಾಲಿಯ ಮೇಲಿದ್ದ ಮತ್ತೊಂದು ಮೊಬೈಲ್ ಚಾರ್ಜಿಂಗ್ ಯೂನಿಟ್ಟು ಬಂದು ನಿಂತಿತ್ತು. ಅಲ್ಲಿದ್ದವರ ಮೋರೆಗಳ ಚಮಕುವಿಕೆಯಿಂದ ಅದೂ ಕೆಲಸ ಮಾಡುತ್ತಿಲ್ಲ ಎಂದು ಬೇಗನೆ ಗೊತ್ತಾಗಿ ಹೋಯಿತು. ಆದರೂ ಚಾರ್ಜರನ್ನು ಸಿಕ್ಕಿಸಿ, ತೆಗೆದು ಮಾಡಿ ಖಾತ್ರಿಪಡಿಸಿಕೊಳ್ಳುತ್ತಿದ್ದ ಜನರನ್ನು ನೋಡಿ 'ಜನಮರುಳೋ, ಜಾತ್ರೆ ಮರುಳೋ' ಎಂಬಂತೆ ನಾನೂ ಹಾಗೆಯೇ ಮಾಡಿ 'ಬಂದ ದಾರಿಗೆ ಸುಂಕವಿಲ್ಲವೆಂದು' ಗೇಟಿಗೆ ಮರಳಿದೆ.

ಅರ್ಧ ಗಂಟೆ ಅವರಿವರ ಮೋರೆ ನೋಡುತ್ತ ಕಳೆದು, ಅಂತೂ ವಿಮಾನವನ್ನು ಪ್ರವೇಶಿಸಿದೆ. ಭಾರತವನ್ನೇ ಪ್ರವೇಶಿಸಿದೆನೇನೋ ಎನ್ನುವಂತೆ ಸುಗಂಧ ಕಡ್ಡಿಯ ಘಮಲಿನ ಸ್ಪ್ರೇ ಗಾಳಿಯಲ್ಲಿ ಹರಿದುಬಂತು. ಕೇಸರಿ–ಕೆಂಪು ಮಿಶ್ರಿತ ಸೀಟುಗಳು, ಪುರಾತನ ಎನ್ನಬಹುದಾದ ಒಳವಿನ್ಯಾಸಗಳು ಭಾರತದ ಒಂದು ಐತಿಹಾಸಿಕ ಯಂತ್ರವನ್ನು ಒಳಹೊಕ್ಕ ಧನ್ಯತೆಯನ್ನು ತಂದುಕೊಟ್ಟವು.

ನನ್ನ ಸೀಟ್ ತಲುಪುವ ವೇಳೆಗೆ, ನಮ್ಮ ಸೀಟಿನ ಮೇಲಿದ್ದ ಲಗೇಜ್ ಕಂಪಾರ್ಟ್‌ಮೆಂಟಿನಲ್ಲಿ ಬೇರೆಯ ಜನರಾಗಲೇ ತಮ್ಮ ಬ್ಯಾಗನ್ನು ಇಟ್ಟು ಗೌರವಿಸಿದ್ದರು. ಹೆಬ್ಬೆರಳೆತ್ತಿ ತೀಕ್ಷ್ಣನೋಟ ಬೀರಿದ್ದ